**Com.O.S.153 /2024**

**PW-1**

**ಸಾಕ್ಷಿಯನ್ನು ದಿನಾಂಕ 06.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಬಿ.ಎ.ಎಸ್ ವಕೀಲರಿಂದಃ</u>**

ಯಾವುದೇ ತಪ್ಪು ಇಲ್ಲದೇ Act of god ಯಿಂದ ಅಪಘಾತವಾದರೂ ಸಹ ನಮ್ಮ ಪಾಲಿಸಿ ಅನ್ವಯವಾಗುತ್ತದೆ ಎಂದರೆ ನಿಜ. ಪ್ರತಿವಾದಿ ಸಂಸ್ಥೆಯ ವಾಹನದಲ್ಲಿ ತೆಗೆದುಕೊಂಡ ಹೋದ ಸರಕು 5 ದಿನಗಳವರೆಗೆ ಯಾವ ಕಾರಣಕ್ಕೆ ಅನಲೋಡ್ ಆಗಿಲ್ಲ ಎಂದು ನನಗೆ ಗೊತ್ತಿಲ್ಲ. ಸರ್ವೇಯರ್ ತಿರುಚಿಯಲ್ಲಿ ತಪಾಸಣೆ ಮಾಡಿದ್ದಾರೆ. ದಿ.06.05.2023 ರಂದು ಸರಕಿಗೆ ಜಖಂ ಆದ ಬಗ್ಗೆ ನಮಗೆ ಮಾಹಿತಿ ಬಂದಿದೆ. letter of subrogation ನ್ನು ಪಡೆದು ಸರಕು ಸಾಗಣೆ ಮಾಡುವವರ ವಿರುದ್ಧ ದಾವೆ ಹಾಕುವುದು ನಾವು ಅನುಸರಿಸುವ ಕ್ರಮವಾಗಿದೆ ಎಂದರೆ ನಿಜ. ಸರ್ವೇಯರ್ ವರದಿಯದಲ್ಲಿ ಡ್ರೈವರ್ ಅಥವಾ ಕ್ಲಿನರ್ ತಪ್ಪಿನಿಂದ ಸರಕುಗಳಿಗೆ ಹಾನಿಯಾಗಿದೆ ಎನ್ನುವ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಸರಕನ್ನು ನಂಜನಗೂಡಿನಲ್ಲಿ ಲೋಡ್ ಮಾಡುವ ಮೊದಲೇ ಅಂದಾಜು 1 ವಾರದ ಮುಂದೆ ಇ-ವೇ ಬಿಲ್ ಕೊಟ್ಟಿರಬಹುದು. ವಿಮಾ ಪಾಲಿಸಿ ಕೊಡುವ ಮುಂಚೆ ಇ-ವೇ ಬಿಲ್ ಕೊಟ್ಟಿರಬಹುದು ಎಂದರೆ ಇರಬಹುದು. ನಿಪಿ-8 ದಾಖಲೆಯಲ್ಲಿ Salvage value ಎಷ್ಟು ಎಂದು ನಮೂದು ಇಲ್ಲ ಎಂದರೆ ನಿಜ. ಸರ್ವೇ ವರದಿ ಪ್ರಕಾರ ತಾಡಪಾಲು ಕವರ್ ಆಗಿದ್ದರೂ ಸಹ ಸರಕಿಗೆ ಹಾನಿಯಾಗಿದ್ದ ಬಗ್ಗೆ ನಮೂದು ಇದೆ ಎಂದರೆ ನಿಜ. ಅನಲೋಡ್ ಮಾಡಲು ಬಹಳ ತಡವಾಗಿದ್ದರಿಂದ ಸರುಕಗಳಿಗೆ ಹಾನಿಯಾಗಿರಬಹುದು ಎಂದರೆ ನನಗೆ ಗೊತ್ತಿಲ್ಲ. ನಂಜನಗೂಡಿನಿಂದ ಸರಕನ್ನು ಲೋಡ್ ಮಾಡುವ ಕಾಲಕ್ಕೆ ಪಡೆದಿದ್ದ ಕ್ವಾಲಿಟಿ ಚೆಕ್ ರಿಪೋರ್ಟ್‌ನ್ನು ಹಾಜರುಪಡಿಸಿರುವುದಿಲ್ಲ. ಜಖಂ ಆದ ಸರುಕುಗಳನ್ನು ನಾವು ಲ್ಯಾಬರಿಟರಿ ಅಲ್ಲಿ ತಪಾಸಣೆ ಮಾಡಿಸಿಲ್ಲ. ಸರುಕನ್ನು ಲೋಡ ಮಾಡುವಾಗ ನಮ್ಮ ಸಂಸ್ಥೆಯವರು ಹಾಜರು ಇರಲಿಲ್ಲ. ಸರಕಿಗೆ

ಹಾನಿಯಾಗಿದ್ದರಿಂದ ಅದು ಪ್ರತಿವಾದಿ ತಪ್ಪಿನಿಂದ ಆಗಿರುತ್ತದೆ ಎಂದು ಹೇಳುತ್ತಿದ್ದೇನೆ. ಡ್ಯಾಮೆಜ್ ಸರ್ಟಿಪಿಕೆಟ್‌ನ್ನು ಪ್ರತಿವಾದಿ ಸಂಸ್ಥೆಯವರು ಕೊಡುತ್ತಾರೆ. ಅದನ್ನು ಯಾವ ರೀತಿ ಕೊಟ್ಟಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿಗೆ 2 ನೇ ವಾದಿ ಸಂಸ್ಥೆಯಿಂದ ಬಹಳಷ್ಟು ಹಣ ಬಾಕಿ ಇದೆ ಎಂದರೆ ಗೊತ್ತಿಲ್ಲ. ಅನಲೊಡಿಂಗ್ ಕಂಪನಿ ಬಳಿ ನಾವು ವರದಿ ಪಡೆದಿಲ್ಲ. ಸರಕನ್ನು ಅನಲೋಡ್ ಮಾಡಲು 5 ದಿನ ಯಾವ ಕಾರಣಕ್ಕೆ ತಡವಾಗಿದೆ ಎಂದು ವಿಚಾರಣೆ ಮಾಡಿಲ್ಲ. ಸರ್ವೆ

ವರದಿಯಲ್ಲಿ ಟೆಂಪರೇಚರ್ ಬಗ್ಗೆ ನಮೂದು ಇಲ್ಲ ಎಂದರೆ ನಿಜ. 2 ನೇ ವಾದಿಗೆ ರೂ.7,95,000/- ಹಣ ಪಾವತಿ ಮಾಡಿದ್ದೇವೆ ಮತ್ತು ರೂ.1,49,977/- ಹಣವನ್ನು ಜಿ.ಎಸ್.ಟಿ ಪಾವತಿ ಮಾಡಿದ ಬಳಿಕ 2 ನೇ ವಾದಿಗೆ ಕೊಟ್ಟಿದ್ದೇವೆ. ಜಿ.ಎಸ್.ಟಿ ಹಣದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಜಖಂ ಆದ ಸರಕನ್ನು ವಾಪಸ ನಂಜನಗೂಡಿಗೆ ಯಾವ ಕಾರಣಕ್ಕೆ ತಂದರು ಎಂದರೆ ಅವರಿಗೆ ಇರುವ ನಿಯಮಗಳ ಪ್ರಕಾರ ತಂದಿರುತ್ತಾರೆ. ಆದರೆ ಆ ನಿಯಮಗಳ ಬಗ್ಗೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು